ವ್ಯವಸ್ಥೆ ಮಾಡ್ಯಾರಂತ ಗೊತ್ತಾಯ್ತು. ಈಗ ದಾರಿ ಸ್ಟಾರ್ಟ್ ಆಗ್ಯಾದಂತ ಗೊತ್ತಾದ ಕೂಡ್ಲೆ ಜರ್ಕಿನ್ ಅನ್ನ ಒಯ್ಯಮು ಅಂತ ಬಂದೆ ಸರ್. ಇನ್ನ ಒಂತಿಂಗಳ ನಮುಗ ಸೂಟಿ. ಆಮ್ಯಾಲೆ ಈ ಮಂದಿ ತಾಂಡೋದ್ರೆ ಯಾರನ್ನಂತ ಕೇಳ್ತೀರಿ? ಎಂಟುನೂರು ರೂಪಾಯಿ ಜರ್ಕಿನ್ ಅದು' ಎಂದು ಎಲ್ಲ ವಿವರವನ್ನು ಒಂದೇ ಉಸಿರಿನಲ್ಲಿ ಹೇಳಿ ಮುಗಿಸಿದ. ತಿಮೋತಿ ಅಬ್ದುಲ್ಲನಿಗೆ ಕೇಳುವಂತೆ ಹೇಳಿದ. ಅಬ್ದುಲ್ಲ ವಾಲೇಕಾರಗ ತೋರಿಸಿದ. ವಾಲೇಕಾರ

'ಕ್ಲಾಸ್ ರೂಮುಗಳಷ್ಟೇ ತಾಂಡೀವಿ ಸರ್ ನಾವು. ಆಫೀಸ್ ರೂಮು, ಸ್ಟಾಫ್ ರೂಮುಗುಳ್ನ ಮುಟ್ಟಕೂ ಓಗಿಲ್ಲ' ಅಂದ. ಮಾಸ್ತರ ತಮ್ಮ ಶಾಲೆಯ ಪ್ಯೂನ್ ಮನೆಗೆ ಮೊದಲು ಹೋಗಿ ವಿಚಾರಿಸಿದ್ದರೆ ಈ ರಗಳೆಯಿರುತ್ತಿರಲಿಲ್ಲವೆಂದು ಗೊಣಗಿಕೊಳ್ಳುತ್ತ ಹೋದ.

11

ಮಳೆ ಎಲ್ಲ ಮುಗಿದು ವಾರ್ಹತ್ತು ದಿನಮಾನ ಕಳೆದ ಮೇಲೆ ಜನಜೀವನ ನಿಧಾನಕ್ಕೆ ಒಂದು ಹಂತಕ್ಕೆ ಬಂದಿದೆ ಅನ್ನಿಸಿದಾಗ ಡೀಸಿಯವರಿಗೆ ನಿರಾಳವಾಗಿತ್ತು.

ಅಷ್ಟು ಭಾರೀ ಪ್ರಮಾಣದಲ್ಲಿ ನೆರೆಪ್ರವಾಹ ಬಂದರೂ ಸಮರ್ಪಕವಾಗಿ ನಿರ್ವಹಿಸಿದ ಜಿಲ್ಲಾಡಳಿತಕ್ಕೆ ಸಿಎಂ ಸಾಹೇಬರ ಕಚೇರಿಯಿಂದ ಮೆಚ್ಚುಗೆ ಸಿಕ್ಕಿದ್ದು ಡೀಸಿ ಸಾಹೇಬರಿಗೆ ಸ್ವರ್ಗಕ್ಕೆ ಮೂರೇ ಗೇಣು ಎಂಬಂತಾಗಿತ್ತು. ಪರಿಹಾರ ಕಾರ್ಯಗಳಿಗಾಗಿ ಬಿಡುಗಡೆಯಾದ ಮೊತ್ತ ಪಕ್ಕದ ಜಿಲ್ಲೆಗಳಿಗಿಂತ ಸಾಕಷ್ಟು ಹೆಚ್ಚಾಗೇ ಇದ್ದುದು ಕೂಡ ಸಾಹೇಬರ ಪ್ರಸನ್ನತೆಗೆ ಮತ್ತೊಂದು ಕಾರಣವಾಗಿತ್ತೆಂಬುದು ಮಾತ್ರ ಶ್ರೀನಿವಾಸರಾವ್‌ಗಲ್ಲದೆ ಅಲ್ಲಿರುವ ಬೇರಾರಿಗೂ ಇನ್ನೂ ಗೊತ್ತಾಗಿರಲಿಲ್ಲ. ತಿಮೋತಿಗೆ ಅದ್ಹೇಗೋ ಇದರ ಸುಳಿವು ಹತ್ತಿ ಅದಾಗಲೇ ಹಳೆಯ ಕಥೆಯಾಗಿತ್ತು. ಇದೇ ಸರಿಯಾದ ಸಂದರ್ಭವೆಂದು ಗ್ರಹಿಸಿದ ಸಾಹೇಬರು ನೆರೆ ಸಂತ್ರಸ್ತರ ಪುನರ್ವಸತಿ ಕಾರ್ಯದಲ್ಲಿ ಜಿಲ್ಲಾಡಳಿತದೊಂದಿಗೆ ಹೆಗಲಿಗೆ ಹೆಗಲಾಗಿ ನಿಂತು ಸಹಕರಿಸಿದ ನಾಲ್ಕಾರು ಜನರಿಗೆ ಸನ್ಮಾನಿಸುವ ಮೂಲಕ ಮಾಧ್ಯಮದವರೂ ಸೇರಿದಂತೆ ಎಲ್ಲ ಬಾಯಿಜೋರು ಮಂದಿ ಹಾಗು ಅಧೀನ ಅಧಿಕಾರಿ ಸಿಬ್ಬಂದಿಗೆ ಒಂದು ಒಳ್ಳೆ ಊಟ ಕೊಡಿಸಿಬಿಟ್ಟರೆ ಮುಂದೆ ಪರಿಹಾರ ವಿತರಣೆ ಕಾರ್ಯ ಸಲೀಸಾಗುವುದೆಂದು ಇಂದಿನ ಈ ಕಾರ್ಯಕ್ರಮವನ್ನು ತರಾತುರಿಯಲ್ಲಿ ತಯಾರಿ ಮಾಡಿದ್ದರು.

ಸನ್ಮಾನ ಮಾತ್ರ ಯಾರಿಗೆಂದು ಡಿಸ್‌ಕ್ಲೋಸ್ ಮಾಡಿರಲಿಲ್ಲ. ನಗರದ ಬುದ್ಧಿಜೀವಿಗಳೆಂದು ಖ್ಯಾತಿ ಪಡೆದಿರುವ ಕೆಲವು ನಿವೃತ್ತರು ವೇದಿಕೆ ಮುಂದಿನ ಸಾಲುಗಳಲ್ಲಿ ಆಸೀನರಾಗಿದ್ದರು. ಡೀಸಿಯವರಂತೂ ಒಳ್ಳೆ ಮದುಮಗನಂತೆ ದುಬಾರಿ ಸೂಟಿನಲ್ಲಿ ಕಂಗೊಳಿಸುತ್ತ ಬಂದವರನ್ನೆಲ್ಲ ಕೈಕುಲುಕಿ ಸ್ವಾಗತಿಸುತ್ತಿದ್ದರು. ಮಾಹಿತಿ ಹಕ್ಕು ಮಾಂತೇಶ, ಪರಿಮಳ ಚಾನೆಲ್ಲಿನ ಪ್ರಹ್ಲಾದ, ಗನ್ ಶಾಟ್‌ನ ಉಪಸಂಪಾದಕ ವೆಂಕಟೇಶ, ದಿನಸಾಮ್ರಾಟ್‌ನ ಹಿರಿಯ ವರದಿಗಾರರಾದ ಆಚಾರ್ರು, ಸಹಮತ ಎನ್‌ಜಿಓದ ಬಾಲಕೃಷ್ಣ, ಸಾಮಾಜಿಕ ಕಾರ್ಯಕರ್ತ ಶಿವಶರಣ, ಸಾಂಸ್ಕೃತಿಕ ಸಂಘಟಕರಾದ ಹಿರೇಮಠ್ ಮತ್ತು ಪ್ರಧಾನ್, ಕೆಲವು ಆಯ್ದ ಜನಪ್ರತಿನಿಧಿಗಳು, ಸಾಂಸ್ಕೃತಿಕ ಆಸಕ್ತಿ ಅಷ್ಟಕ್ಕಷ್ಟೇ ಇದ್ದರೂ ಎಲ್ಲ ಬಲ್ಲವರಂತೆ ಆಡುವ ಕೆಲವು ಎ ಮತ್ತು ಬಿ ದರ್ಜೆ ಅಧಿಕಾರಿಗಳು.. ಎಲ್ಲ ಒಬ್ಬೊಬ್ಬರಾಗಿ ಬಂದು ಜಮಾಯಿಸತೊಡಗಿದರು. ಡ್ರೈವರ್‌ಗಳು, ಪರಿಹಾರ ಕಾರ್ಯದ ಡ್ಯೂಟಿ ಮಾಡಿದ ನಾಗರಾಜ ಮಾಸ್ತರ್ ಮುಂತಾದ ಶಿಕ್ಷಕರು ಮೂಲೆಯಲ್ಲಿ ತಮ್ಮದೊಂದು ಗುಂಪು ಮಾಡಿಕೊಂಡು ಹರಟೆಯಲ್ಲಿ ಮುಳುಗಿದ್ದರು. ಅಬ್ದುಲ್, ತಿಮೋತಿ, ಮಂಜುನಾಥ, ಅಮರೇಶ, ಫರ್ಜಾನಾ, ಗಂಗಮ್ಮ ಎಲ್ಲ ಬಂದಾಗ ಯಾರೋ ಹಾಡುತ್ತಿದ್ದರು. ಯಾರೂ ಕೇಳಿಸಿಕೊಳ್ಳುತ್ತಿರಲಿಲ್ಲ. ಎದ್ದು ಓಡಾಡಲಾಗದ ನಿವೃತ್ತ ಬುದ್ಧಿಜೀವಿಗಳು ಕೇಳುತ್ತಿರುವ ಭಾವ ನಟಿಸುತ್ತ ರೂಢಿಯಲ್ಲಿ ಆಚೀಚೆ ಗೋಣಾಡಿಸುತ್ತಿದ್ದರು.

ಎಲ್ಲ ಐಟೆಮ್ಮುಗಳು ಆಲ್‌ಮೋಸ್ಟ್ ರೆಡಿಯಾಗಿ ಇಡೀ ವಾತಾವರಣ ಅವುಗಳ ಪರಿಮಳದಲ್ಲಿ ಮುಳುಗಿ ಘಮ್ಮೆನ್ನುತ್ತಿತ್ತು. ಈಗ ಶುರು ಮಾಡಿದರೆ ಕಾರ್ಯಕ್ರಮವು ಒಂದರ್ಧ ಮುಕ್ಕಾಲು ಗಂಟೆಯಲ್ಲಿ ಮುಗಿಯುವುದೆಂದೂ, ನಂತರ ಊಟ ಮುಗಿಸುವ ಹೊತ್ತಿಗೆ ಎಲ್ಲ ಅದೇ ಹೊತ್ತಾಗುತ್ತದೆಂದು ಪಿಎ ಶ್ರೀನಿವಾಸರಾವ್ ಸಾಹೇಬರ ಕಿವಿಯಲ್ಲುಸುರುತ್ತಿದ್ದ.




ಸಾಹೇಬರು ಹೌದೆಂಬಂತೆ ತಲೆಯಾಡಿಸುತ್ತಲೇ ಯಾರಿಗಾಗಿಯೋ ಕಾಯುತ್ತಿರುವಂತೆ ಮತ್ತೊಮ್ಮೆ ಗೇಟ್ ಕಡೆ ನೋಡಿದರು.

ಅವರ ಇನ್ನೋವಾ ಕಾರು ನಿಧಾನವಾಗಿ ಒಳಬಂತು.

ಅದರಿಂದ ಕೆಳಗಿಳಿದ ಸಂಪಾದಕ ವಿ.ಕೆ. ದೇಸಾಯಿಯವರು, ಶೇಖ್ ಸಾಹೇಬ್‌ರು, ಮೂಲಿಮನಿ ಮಲ್ಲಪ್ಪನವರು ಹಾಗೂ ಗಡಿವಾಗಿಲಿ ಠಾಣೆಯ ಪೋಲಿಸ್ ರವಿಕುಮಾರ್ರನ್ನು ಸ್ವತಃ ಸಾಹೇಬರೇ ಹೋಗಿ ಬರಮಾಡಿಕೊಂಡರು. ಡೀಸಿ ಸಾಹೇಬರ ಇನ್ನೋವಾದಲ್ಲಿ ಕುಳಿತುಕೊಳ್ಳಬೇಕಾಗಿ ಬಂದಾಗಲೇ ನೀರು ನೀರಾಗಿದ್ದ ರವಿಕುಮಾರ್‌ಗೆ, ಈಗ ಸ್ವತಃ ಸಾಹೇಬರೇ ಬಂದು ರಿಸೀವ್ ಮಾಡಿಕೊಂಡಾಗ ಕಂಟ್ರೋಲ್ ಮಾಡಿಕೊಳ್ಳಲಾಗಲಿಲ್ಲ. ಸೀದಾ ಕಾರಿಳಿದವನೇ ಅವರ ಕಾಲು ಹಿಡಿದುಕೊಂಡುಬಿಟ್ಟ. ಒಳಗಾದ ಖುಷಿಯನ್ನು ಒತ್ತಿಟ್ಟುಕೊಂಡು ಡೀಸಿಯವರು ಅತ್ಯಂತ ಸೌಜನ್ಯಪೂರ್ವಕವಾಗಿ ಅವನ ಭುಜ ಹಿಡಿದು ಎತ್ತಿ, ಯಾರಾದರೂ ಇದನ್ನು ನೋಡಿದರೋ ಇಲ್ಲವೋ ಎಂದು ಆಚೀಚೆ ನೋಡಿದರು.

ಡೀಸಿಯವರು ವೇದಿಕೆ ಮೇಲೇರಿ ಒಳ್ಳೆ ಲಹರಿಯಲ್ಲಿ ಮಾತಾಡಿ ಮಳೆ ಶುರುವಾದಾಗಿನಿಂದ ಹಿಡಿದು ಅವತ್ತಿನವರೆಗಿನ ಪ್ರಮುಖ ಘಟನೆಗಳನ್ನು ಮೆಲುಕು ಹಾಕಿದರು. ತಾವು ಅನುಭವಿಸಿದ ಸಂಕಟ, ವೇದನೆ ಮತ್ತು ಸಂದಿಗ್ಧಗಳನ್ನು ಹೇಳುವಾಗಲೂ ಅವರ ಮನಸಿನ ಲಹರಿಯಲ್ಲಿ ಯಾವುದೇ ಬದಲಾವಣೆ ಕಾಣಲಿಲ್ಲ. ಎಲ್ಲ ಹೇಳಿಯಾದ ಮೇಲೆ ಜಿಲ್ಲಾಡಳಿತದ ಮಳೆಪರಿಹಾರ ಕಾರ್ಯದಲ್ಲಿ ತಮ್ಮ ತನು ಮನ ಧನಗಳಿಂದ ಕೂಡಿದ ನಿಸ್ವಾರ್ಥ ಸೇವೆಯನ್ನು ಸಲ್ಲಿಸಿದ ಕವಿ ಮಲ್ಲಪ್ಪ ಮೂಲಿಮನಿ, ಚಿಂತಕ ಶೇಖ್ ಸಾಹೇಬ್ ಖಾನಾಪುರ್, ಗನ್‌ಶಾಟ್ ಪತ್ರಿಕೆಯ ಸಂಪಾದಕ ವೆಂಕಟೇಶ್ ಕುಲಕರ್ಣಿ ಹಾಗೂ ಬಾಲಕಿಯೊಬ್ಬಳ ಜೀವ ಉಳಿಸಿದ ಪೇದೆ ರವಿಕುಮಾರ್‌ರನ್ನು ವೇದಿಕೆಗೆ ಕರೆದು ಶಾಲು ಹಣ್ಣು ಹಾರ ನೀಡಿ ಸನ್ಮಾನಿಸಿದರು.

ತಿಮೋತಿ ಮತ್ತು ಅಬ್ದುಲ್ಲ ಮುಖ ಮುಖ ನೋಡಿಕೊಂಡರು.

ಗಂಗಮ್ಮ ಮತ್ತು ಫರ್ಜಾನಾ ಎಂಬ ತಮ್ಮ ಟೀಮಿನ ಹುಡುಗಿಯರು ಅಂದು ಸಂಜೆ ಮತ್ತೆ ತನ್ನನ್ನು ಹೊರಡಿಸಿಕೊಂಡು ಹೋಗಿ ಚಿಂತ್ರವೇಲಿಯ ಆ ತಾಯಿಮಗಳಿಗೆ ತಲಾ ಒಂದು ಸೀರೆ ಕೊಟ್ಟು ಬಂದುದನ್ನು ತಿಮೋತಿಗೆ ಹೇಳುತ್ತ ಅಬ್ದುಲ್ಲ ಒಂದು ಕ್ಷಣ ಭಾವಾವೇಶಕ್ಕೆ ಒಳಗಾಗುತ್ತಿದ್ದಂತೆ ಧಡ್ ಧಡಲ್ ಎಂದು ಜೋರು ಸದ್ದಾಯಿತು. ಟಪ್ ಟಪ್ ಟಪ್ ಟಪ್ ಟಪ್ ಟಪ್.. ಅಲ್ಲೊಂದು ಇಲ್ಲೊಂದು ಹನಿಗಳು ಉದುರತೊಡಗಿ, ನಿಧಾನಕ್ಕೆ ಮೋಡ ಕಪ್ಪಾಗಿ ದಟ್ಟೈಸತೊಡಗಿತು.

(ಮುಗಿಯಿತು)